	ಪ್ರಮಾಣ	
3	ಡೈರಿಗಳಿಗೆ ಸರಬರಾಜು ಆಗುವ ಹಾಲಿನ ಪ್ರಮಾಣ	996 ಲೀಟರ್
4	ಸ್ಥಳೀಯ ಮಾರುಕಟ್ಟೆಗೆ ಲಭ್ಯವಿರುವ ಹಾಲಿನ ಪ್ರಮಾಣ	32,423 ಲೀಟರ್

ಏ) (1) ಜೊಯಿಡಾ ತಾಲ್ಲೂಕಿನಲ್ಲಿ ಯಾವುದೇ ಹಾಲು ಉತ್ಪಾದಕರ ಸಹಕಾರ ಸಂಘಗಳು ಇಲ್ಲದೆ ಕಾರಣ ಪ್ರೋತ್ಸಾಹ ಧನ ನೀಡಲಾಗಿರುವುದಿಲ್ಲ.

(2) ಹಳಿಯಾಳ ತಾಲ್ಲೂಕಿನಲ್ಲಿ ಕಳೆದ 3 ವರ್ಷಗಳಲ್ಲಿ ಹಾಲಿಗಾಗಿ ಸರ್ಕಾರದಿಂದ ನೀಡಲಾಗಿರುವ ಸಹಾಯ ಧನದ ವಿವರ ಈ ಕೆಳಕಂಡಂತಿದೆ;

2010-11	ರೂ. 5,35,400/-
2011-12	ರೂ 4,59,462/-
2012-13	ರೂ 1,23,530/- (ಸೆಪ್ಟೆಂಬರ್ 2012ರ ವರೆಗೆ

ಸಂಖ್ಯೆ: ಪಸಂಮೀ 30 ಪಸಸೆ 2013

ಝಳಕಿ ಗ್ರಾಮದಲ್ಲಿ ಪಾಲಿಟೆಕ್ನಿಕ್ ಸಂಸ್ಥೆ
ಚುಕ್ಕೆ ಗುರುರಿಲ್ಲದ ಪ್ರಶ್ನೆ ಸಂಖ್ಯೆ 6 : (42)

ಡಾ: ಬಗಲಿ ಸಾರ್ವಭೌಮ ಸಾತಗೌಡ (ಇಂಡಿ)

ಅ) ಇಂಡಿ ತಾಲ್ಲೂಕಿನ ಝಳಕಿ ಗ್ರಾಮದಲ್ಲಿ ಸರ್ಕಾರಿ ಪಾಲಿಟೆಕ್ನಿಕ್ ಸಂಸ್ಥೆಯನ್ನು ಯಾವಾಗ ಪ್ರಾರಂಭಿಸಲಾಯಿತು;

ಆ)ಈ ಸಂಸ್ಥೆಯಲ್ಲಿ ಮಂಜೂರಾದ ಶಿಕ್ಷಕರ ಹುದ್ದೆಗಳ ಸಂಖ್ಯೆ ಎಷ್ಟು; ಪ್ರಸಕ್ತ ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಕರ ಸಂಖ್ಯೆ ಎಷ್ಟು;

ಇ) ಈ ಸಂಸ್ಥೆಗೆ ಸ್ಥಳೀಯ ಶಾಸಕರೇ ಭೂಮಿಯನ್ನು ದಾನವಾಗಿ ನೀಡಿದ್ದು ಕಟ್ಟಡ ನಿರ್ಮಾಣ ಕಾರ್ಯವನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಸಿ.ಟಿ. ರವಿ (ಮಾನ್ಯ ಉನ್ನತ ಶಿಕ್ಷಣ ಸಚಿವರು)

ಅ) ಇಂಡಿ ತಾಲ್ಲೂಕಿನ ಝಳಕಿ ಗ್ರಾಮದಲ್ಲಿ ಸರ್ಕಾರಿ ಪಾಲಿಟೆಕ್ನಿಕ್ ಸಂಸ್ಥೆಯನ್ನು 2009ರಲ್ಲಿ ಪ್ರಾರಂಭಿಸಲಾಯಿತು.

ಆ)ಮಂಜೂರಾದ ಶಿಕ್ಷಕರ ಹುದ್ದೆಗಳ ಸಂಖ್ಯೆ 31, 22 ಪೂರ್ಣಕಾಲಿಕ ಉಪನ್ಯಾಸಕರು ಹಾಗೂ 05 ಅರೆಕಾಲಿಕ ಉಪನ್ಯಾಸಕರು ಕಾರ್ಯ ನಿರ್ವಹಿಸುತ್ತಿರುತ್ತಾರೆ.

ಇ) ಅನುದಾನದ ಲಭ್ಯತೆಯನುಸಾರ ಕ್ರಮ ಕೈಗೊಳ್ಳಲಾಗುವುದು.

ಸಮುದಾಯ ಆರೋಗ್ಯ ಕೇಂದ್ರಗಳ ಕಟ್ಟಡಗಳು
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 20 : (37)

ಶ್ರೀ ಕುಮಾರ ಸ್ವಾಮಿ ಕೆ.ಜಿ. (ಶಿವಮೊಗ್ಗ ಗ್ರಾಮಾಂತರ)

ಅ) ಶಿವಮೊಗ್ಗ ಗ್ರಾಮಾಂತರ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಹೊಳೆಹೊನ್ನೂರು ಸಮುದಾಯ ಆರೋಗ್ಯ ಕೇಂದ್ರ ಕಟ್ಟಡ ಶಿಥಿಲಗೊಂಡು ಮಳೆಗಾಲದಲ್ಲಿ ಸೋರುತ್ತಿದ್ದು ಹೊಸ ಕಟ್ಟಡ ನಿರ್ಮಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ)ಇಲಾಖೆಯ ಅನುಮೋದನೆಗಾಗಿ ಅಂದಾಜು ಪಟ್ಟಿ ಸಹಿತ ತಾಂತ್ರಿಕ ವರದಿಯನ್ನು ಸಲ್ಲಿಸಿದ್ದು, ಕರ್ನಾಟಕ ಆರೋಗ್ಯ ಪದ್ಧತಿ ಅಭಿವೃದ್ಧಿ ಮತ್ತು ಸುಧಾರಣೆ ಯೋಜನೆಯಿಂದ ಕಾಮಗಾರಿ ಪ್ರಾರಂಭಿಸಲು ಏನು ಕ್ರಮ ವಹಿಸಲಾಗಿದೆ;

ಇ) ಹೊಳಲೂರು ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಈಗಾಗಲೇ ಉನ್ನತೀಕರಿಸಿದ್ದು ಸಮುದಾಯ ಆರೋಗ್ಯ ಕೇಂದ್ರ ಮಟ್ಟಕ್ಕೆ ಸಮನಾಗಿ ಕಟ್ಟಡ ಕಾಮಗಾರಿಯನ್ನು ಪ್ರಾರಂಭಿಸದೇ ಇರಲು ಕಾರಣವೇನು;